# ಜೊಲ್ಲೆ ಗ್ರುಪ್ ವಾರ್ತಾ ಪತ್ರ

# ದರ್ಪಣ

(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)

ಸಪ್ಟೆಂಬರ್ 2025–ಸಂಪುಟ–9 ಸಂಚಿಕೆ–09





ಶ್ರೀ ಅಣ್ಣಾಸಾಹೇಬ ಜೊಲ್ಲೆ ಸ್ವತಂತ್ರ್ಯ ವಸತಿ  ಪದವಿ ಪೂರ್ವ ವಿಜ್ಞಾನ ಕಾಲೇಜ್ ನಿಪ್ಪಾಣಿಯಲ್ಲಿ 'BEYOND BOOKS' ಪ್ರೇರಣಾದಾಯಕ ಭಾಷಣ ಕಾರ್ಯಕ್ರಮದಲ್ಲಿ ಸಿದ್ಧಗಿರಿ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ನರಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥರು ಭಾರತದ ಸುಪ್ರಸಿದ್ಧ ನ್ಯೂರೋ ಸರ್ಜನ್ ಡಾ. ಶಿವಶಂಕರ ಮರಜಕ್ಕೆ ಅವರನ್ನು ಜೊಲ್ಲೆ ದಂಪತಿ ಹಾಗೂ ಶ್ರೀ ಬಸವಪ್ರಸಾದ ಜೊಲ್ಲೆ ಸತ್ಕರಿಸುತ್ತಿರುವ ದೃಶ್ಯ.


**ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ್)**




ಶಾಖೆಗಳು 228 (ಕರ್ನಾಟಕ ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಾದ್ಯಂತ)

ಠೇವು 4573+ ಕೋಟಿ

ಸಾಲ 3507+ ಕೋಟಿ

ಸದಸ್ಯರು 4.22+ ಲಕ್ಷ

ಗುಂತಾವಣೆ 1133+ ಕೋಟಿ

ಲಾಭ 2024-25 45+ ಕೋಟಿ


## ಸಾರ್ಥಕ 30ರ ಸಂಭ್ರಮದಲ್ಲಿ “ಯುಥ್ ಐಕಾನ್”

## ಶ್ರೀ ಬಸವಪ್ರಸಾದ ಅಣ್ಣಾಸಾಹೇಬ ಜೊಲ್ಲೆ

ಶ್ರೀ ಬಸವಪ್ರಸಾದ ಜೊಲ್ಲೆ ಅವರು ನಿತ್ಯ ಜೀವನದಲ್ಲಿ ಶಿಸ್ತು, ಸಂಯಮತೆ, ಸಹನಶೀಲತೆ ಹಾಗೂ ಮಾನವೀಯ ಮೌಲ್ಯಗಳನ್ನು ಹಾಸುಹೊಕ್ಕಾಗಿಸಿಕೊಂಡು ಸಮಾಜಕ್ಕೆ ಮಾದರಿಯಾಗಿ, ಆದರ್ಶಪ್ರಾಯರಾಗಿ ಮತ್ತು ಪ್ರೇರಕ ಶಕ್ತಿಯಾಗಿ ಬದುಕುತ್ತಿರುವ ಜೊಲ್ಲೆ ಮನೆತನದ ಆಶಾಜ್ಯೋತಿ, ಕೀರ್ತಿ ಕಳಶ ಯುವ ಕಣ್ಮಣಿಯಾಗಿದ್ದಾರೆ. ಯುವ ಸಮುದಾಯ ಹಾಗೂ ಸಮಾಜದ ಶ್ರೇಯೋಭಿವೃದ್ಧಿಗಾಗಿ ನಿರಂತರ ಪ್ರಯತ್ನಿಸುತ್ತಿದ್ದಾರೆ. ಸಮಾಜದಲ್ಲಿರುವ ಅಸಹಾಯಕರನ್ನು, ದುರ್ಬಲರನ್ನು ಮತ್ತು ಕಷ್ಟದಲ್ಲಿದ್ದವರನ್ನು ಗುರುತಿಸಿ ಸಹಾಯ ಸಹಕಾರ ನೀಡುವ ಇವರ ಕಾರ್ಯ ವೈಖರಿ ಅತ್ಯಂತ ಜನ ಮೆಚ್ಚುಗೆಗೆ ಪಾತ್ರವಾಗಿದೆ.

ಉತ್ತಮ ಸಂಸ್ಕಾರ, ಆಚಾರ–ವಿಚಾರ ರೂಢಿಸಿಕೊಂಡು ಕ್ರಿಯಾಶೀಲ ಹಾಗೂ ಸಂವೇದನಶೀಲ ಗುಣಗಳನ್ನು ಅಳವಡಿಸಿಕೊಂಡು ಸಾರ್ಥಕ ಬದುಕನ್ನು ರೂಪಿಸಿಕೊಂಡಿರುವ ಯುಥ ಐಕಾನ್ ಶ್ರೀ ಬಸವಪ್ರಸಾದ ಜೊಲ್ಲೆ ಯವರು ಬದುಕಿಗೆ ಸಾತ್ವಿಕ ಮುನ್ನುಡಿ ಬರೆದು ಸಮಾಜಮುಖಿ ಮತ್ತು ಶಿಕ್ಷಣಮುಖಿ ಕಾರ್ಯಗಳಿಗೆ ತಮ್ಮ ಬದುಕನ್ನು ಮುಡಿಪಾಗಿಟ್ಟಿರುವ ಇವರ ವ್ಯಕ್ತಿತ್ವವು ಎಲ್ಲರಿಗೂ ಮಾದರಿಯಾಗಿದೆ. ನಾಡಿನ ಜನಮನದಲ್ಲಿ ನೆಲೆಸಿರುವುದು ನಮ್ಮೆಲ್ಲರಿಗೆ ಹೆಮ್ಮೆಯ ಸಂಗತಿಯಾಗಿದೆ. ಇವರಲ್ಲಿರುವ ವೈಚಾರಿಕತೆ, ವೈಜ್ಞಾನಿಕತೆ ಮತ್ತು ಆಧುನಿಕತೆಯ ಮೌಲ್ಯಗಳನ್ನು ಸ್ವೀಕರಿಸುವ ಮನೋಪ್ರವೃತ್ತಿ ಹೊಸದನ್ನು ಸೃಷ್ಟಿಸುವ ಆಲೋಚನೆಗಳು, ಯೋಜನೆಗಳು ಮತ್ತು ಪರಿವರ್ತನೆಗೆ ಒತ್ತು ನೀಡುವ ಧೋರಣೆಗಳು ನಾಡಿನ ಶಿಕ್ಷಣ ಹಾಗೂ ಔದ್ಯೋಗಿಕ ಕ್ಷೇತ್ರದಲ್ಲಿನ ಕ್ರಾಂತಿಯ ಮುನ್ಸೂಚನೆಗಳಾಗಿವೆ.

ಇವರಲ್ಲಿರುವ ನಾಯಕತ್ವದ ಗುಣ ಹಾಗೂ ಪಾದರಸದಂತೆ ಲವಲವಿಕೆಯಿಂದ, ಹುರುಪು–ಹುಮ್ಮಸ್ಸಿನಿಂದ ಮತ್ತು ಉತ್ಸಾಹದಿಂದ ಪ್ರತಿಯೊಂದು ಕಾರ್ಯಚಟುವಟಿಕೆಯನ್ನು ನಿರ್ವಹಣೆ ಮಾಡುವ ವ್ಯಕ್ತಿತ್ವ ಇಂದು ಜೊಲ್ಲೆ ಗ್ರುಪ್‌ನ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗಿದೆ.

ಜೊಲ್ಲೆ ಗ್ರುಪ್‌ನ ಸಂಪೂರ್ಣ ಯಶಸ್ಸು ಇವರಲ್ಲಿರುವ ಉತ್ತಮ ಗುಣಮಟ್ಟದ ನಾಯಕತ್ವದ ಪ್ರತಿಬಿಂಬವಾಗಿದೆ. ಯಶಸ್ವಿ ಮತ್ತು ಜನಪ್ರಿಯ ನಾಯಕರು ಪರಿಣಾಮಕಾರಿ ಚಿಂತನೆಗಳನ್ನು ಹೊಂದಿರುತ್ತಾರೆಂಬುವುದಕ್ಕೆ ಶ್ರೀ ಬಸವಪ್ರಸಾದ ಅ. ಜೊಲ್ಲೆಯವರೇ ಸತ್ಯ ನಿದರ್ಶನವಾಗಿದ್ದಾರೆ. ಸ್ವಯಂ ಪ್ರೇರಣೆಯಿಂದ ಅಪೇಕ್ಷಿತ ಕಾರ್ಯಗಳನ್ನು ಉದ್ಯೋಗಿಗಳಿಂದ ಅತ್ಯಂತ ಉತ್ತಮ ರೀತಿಯಿಂದ ಪಡೆದುಕೊಳ್ಳುವ ಸಾಮರ್ಥ್ಯ ಇವರಲ್ಲಿದೆ. ಪರಹಿತ ಕಾರ್ಯಗಳು, ಬದ್ಧತೆಗಳು, ಕ್ರಿಯಾತ್ಮಕ ಚಿಂತನೆಗಳು, ಮುಂದಾಲೋಚನೆಗಳು ಮತ್ತು ದೂರದೃಷ್ಟಿತ್ವ ಗುಣ ಹೀಗೆ ಇತ್ಯಾದಿ ಅಂಶಗಳು ಇಂದು ಇವರು ಸಮಾಜದಲ್ಲಿ ಪ್ರಭಾವಿ ಯುವ ನಾಯಕರಾಗಿ ಹೊರಹೊಮ್ಮಲು ಸಹಾಯಕಾರಿಯಾಗಿವೆ. ಉತ್ತಮ ಹವ್ಯಾಸಗಳು, ಉತ್ತಮ ಅಭ್ಯಾಸ, ಉತ್ತಮ ನಡೆನುಡಿ, ದೇಶ ಪ್ರೇಮ, ಮಾನವಿಯ ಮೌಲ್ಯ, ನೈತಿಕ ಮೌಲ್ಯ, ಶೈಕ್ಷಣಿಕ ಮೌಲ್ಯ, ಆಧ್ಯಾತ್ಮಿಕ ಮೌಲ್ಯ, ವಿವಿಧ ಧನಾತ್ಮಕ ಮೌಲ್ಯಗಳಿಗೆ ಆದ್ಯತೆ ನೀಡಿ ತಂದೆತಾಯಿ ತೋರಿದ ಸಾಧನೆಯ ಮಾರ್ಗದಲ್ಲಿ ನಡೆಯುತ್ತಿದ್ದಾರೆ. ಪ್ರಜ್ಞಾವಂತಿಕೆ, ನಿಷ್ಠೆ, ಸಕಾರಾತ್ಮಕ ಚಿಂತನೆಗಳು ಕ್ರಿಯಾಶೀಲತೆ, ಆತ್ಮವಿಶ್ವಾಸ ಮತ್ತು ಛಲಗಾರಿಕೆ ಇವರ ಯಶಸ್ವಿ ಬದುಕಿಗೆ ಆಧಾರ ಸ್ಥಂಬಗಳಾಗಿವೆ. "ಯಾವುದೇ ಒಬ್ಬ ಯಶಸ್ವಿ ಯುವಕನ ಸಾಧನೆಯ ಹಿಂದೆ ತಂದೆ ತಾಯಿ ಸದಾ ಪ್ರೇರಕ ಶಕ್ತಿಯಾಗಿರುತ್ತಾರೆ". ಎಂಬುವುದಕ್ಕೆ ಜನಪ್ರಿಯ ಮಾಜಿ ಸಂಸದರು ಹಾಗೂ ಜೊಲ್ಲೆ ಗ್ರುಪ್‌ನ ಸಂಸ್ಥಾಪಕರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಹಾಗೂ ನಿಪ್ಪಾಣಿಯ ಜನಪ್ರಿಯ ಶಾಸಕಿಯರಾದ ಸೌ. ಶಶಿಕಲಾ ಜೊಲ್ಲೆ ಅವರು ಸತ್ಯ ನಿದರ್ಶನವಾಗಿದ್ದಾರೆ. ತಂದೆತಾಯಿಯ ಜೊತೆಗೆ ಕಂಕಣಬದ್ಧರಾಗಿ ಕಾರ್ಯ ನಿರ್ವಹಿಸುವಲ್ಲಿ ಶ್ರೀ ಬಸವಪ್ರಸಾದ ಜೊಲ್ಲೆಯವರ ಪಾತ್ರ ಗುರುತರವಾಗಿದೆ.

ಎಂತಹ ಸಂಕೀರ್ಣ ಪರಿಸ್ಥಿತಿ ಹಾಗೂ ಸಂದಿಗ್ದ ಸಂದರ್ಭದಲ್ಲೂ ಕಂಗೆಡದೆ ಮಹಾಮಾನವತಾವಾದಿ ಅಣ್ಣ ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಜನರ ಹಿತಾಸಕ್ತಿಗೆ ಸ್ಪಂದಿಸಿ ಶಿಕ್ಷಣ, ಸಹಕಾರ, ಸಮಾಜ, ಔದ್ಯೋಗಿಕ ಮತ್ತು ಆರೋಗ್ಯದ ಕ್ಷೇತ್ರಗಳಿಗೆ ಸಂಪೂರ್ಣ ಸಹಾಯ ಸಹಕಾರ ನೀಡಿ ಸೌಲಭ್ಯಗಳನ್ನು ಒದಗಿಸಿ ನಾಡಿನ ಜನರ ಪಾಲಿಗೆ ಆದರ್ಶ ಪ್ರಾಯರಾಗಿದ್ದಾರೆ. ಸಂಸ್ಥೆಯ ವಿವಿಧ ಕ್ಷೇತ್ರಗಳಲ್ಲಿ ದುಡಿಯುವ ಕಾರ್ಮಿಕರು ಮತ್ತು ಶಿಕ್ಷಕರ ಕುಟುಂಬಗಳು ಇವರನ್ನೇ ಅವಲಂಬಿಸಿವೆ.

ಸರ್ವರ ಕಲ್ಯಾಣ, ಸರ್ವಜನರ ಸುಖ ಬಯಸುವ, ಯುಥ್ ಐಕಾನ್ ಎಂದೇ ಪ್ರಸಿದ್ಧರಾಗಿರುವ ಶ್ರೀಮಾನ್ ಬಸವಪ್ರಸಾದ ಜೊಲ್ಲೆಯವರಿಗೆ 30ನೇ ವರ್ಷದ ಹುಟ್ಟುಹಬ್ಬದ ಅನಂತಕೋಟಿ ಹಾರ್ದಿಕ ಶುಭಾಶಯಗಳು ! ಸದಾ ನೈತಿಕ ಬೆಂಬಲ ನೀಡುವ ಮೂಲಕ ಜನರ ಮನದಾಳದಲ್ಲಿ ನೆಲೆಸಿರುವ ಇವರಿಗೆ ಭಗವಂತ ಆಯುರ್ ಆರೋಗ್ಯ ಭಾಗ್ಯ ನೀಡಿ ಇವರಲ್ಲಿರುವ ಚೈತನ್ಯ ನೂರ್ಮಡಿಗೊಳ್ಳಲೆಂದು ಭಗವಂತನಲ್ಲಿ ಪ್ರಾರ್ಥಿಸೋಣ !!


ಪ್ರೊ. ಬಾಬಾಸಾಹೇಬ ಆರ್. ಕಾಮನಗೋಳ
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಎಡ್.)
ಶಿಕ್ಷಣ ಮಹಾವಿದ್ಯಾಲಯ, ನಣದಿ

## ಶಿವಶಂಕರ ಜೊಲ್ಲೆ ಕನ್ನಡ ಪ್ರಾಥಮಿಕ ಹಾಗೂ ಪ್ರೌಢ ಶಾಲೆ, ಯಕ್ಸಂಬಾ

# 79 ನೇ ಸ್ವಾತಂತ್ರ್ಯ ದಿನಾಚರಣೆ



ಶಿವಶಂಕರ ಜೊಲ್ಲೆ ಕನ್ನಡ ಪ್ರಾಥಮಿಕ ಹಾಗೂ ಪ್ರೌಢ ಶಾಲೆ, ಯಕ್ಸಂಬಾದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅತಿ ವಿಜೃಂಭಣೆಯಿಂದ ಆಚರಿಸಿಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆಶಾಜ್ಯೋತಿ ವಿಶೇಷ ಮಕ್ಕಳ ವಸತಿ ಶಾಲೆಯ ಅಧ್ಯಕ್ಷರಾದ  ಜ್ಯೋತಿಪ್ರಸಾದ ಜೊಲ್ಲೆ ಹಾಗೂ ವೇದಿಕೆ ಮೇಲಿನ ಗಣ್ಯರು ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಹಾಗೂ ಸಂವಿಧಾನ ಶಿಲ್ಪಿ ಡಾ॥ ಬಿ.ಆರ್.ಅಂಬೇಡ್ಕರ ಅವರ ಭಾವಚಿತ್ರಕ್ಕೆ ಪುಷ್ಪವನ್ನು ಸಲ್ಲಿಸಿ, ಧ್ವಜಾರೋಹಣ ನೆರವೇರಿಸಿದರು.

ದಿವ್ಯ ಸಾನಿಧ್ಯ ವಹಿಸಿದ ಕಾಡಾಪೂರ ಸಿದ್ಧಾರೂಢ ಮಠದ ಪ.ಪೂ. ರಾಜಯೋಗಿ ನಾಗಲಿಂಗ ಮಹಾಸ್ವಾಮೀಜಿ ಇವರು ಪ್ರಾಥಮಿಕ ಹಾಗೂ ಪ್ರೌಢ ವಿಭಾಗದ ಮಕ್ಕಳಿಗಾಗಿ ಆಯೋಜಿಸಿದ ಪಾಟ್ ಅಲಂಕಾರ, ರಂಗೋಲಿಯಲ್ಲಿ ವಿಜ್ಞಾನ ಚಿತ್ರಗಳ ಪ್ರದರ್ಶನ, ಹಣ್ಣು ಮತ್ತು ತರಕಾರಿಗಳ ಅಲಂಕಾರ ಸ್ಪರ್ಧೆಗಳನ್ನು ಉದ್ಘಾಟಿಸಿದರು.

ಶಾಲೆಯ ಸಹಶಿಕ್ಷಕರಾದ ವ್ಹಿ ಬಿ ಖೋತ ಮಾತನಾಡಿ ಗಾಂಧೀಜಿಯವರು ಸತ್ಯ ಅಹಿಂಸಾತ್ಮಕ ಹೋರಾಟ ಹಾಗೂ ಅನೇಕ ಚಳುವಳಿಗಳ ಮೂಲಕ ಸ್ವಾತಂತ್ರ್ಯವನ್ನು ತಂದು ಕೊಡುವುದರಲ್ಲಿ ಯಶಸ್ವಿಯಾದರು. ಭಾರತವು ಅನೇಕ ಸ್ವಾತಂತ್ರ್ಯ ಹೋರಾಟಗಾರರ ನಿರಂತರ ಪರಿಶ್ರಮದ ಫಲವಾಗಿ ಇಂದು ನಾವೂ 79ನೇ ಸ್ವಾತಂತ್ರ್ಯ ದಿನವನ್ನು ನಮ್ಮ ಶಾಲೆಯಲ್ಲಿ ಅತಿ ವಿಜೃಂಭಣೆಯಿಂದ ಆಚರಿಸುತ್ತಿದ್ದು, ಸ್ವಾತಂತ್ರ್ಯಕ್ಕಾಗಿ ಮಡಿದ ವೀರರನ್ನು ಸ್ಮರಿಸಿ ಅವರ ತತ್ವ, ಆದರ್ಶತೆಗಳನ್ನು ಮೈಗೂಡಿಸಿಕೊಂಡು ರಾಷ್ಟ್ರದ ಪ್ರಗತಿಗೆ ನಾವೆಲ್ಲರೂ ಬದ್ಧರಾಗಬೇಕೆಂದು ತಿಳಿಸಿದರು.




ನಿಪ್ಪಾಣಿಯ ಶಿವಂಕರ ಜೊಲ್ಲೆ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಬಸವಜ್ಯೋತಿ ಯೂಥ ಫೌಂಡೇಶನ ಅಧ್ಯಕ್ಷ್ಯರಾದ ಶ್ರೀ. ಬಸವಪ್ರಸಾದ ಜೊಲ್ಲೆ ಯವರು ಧ್ವಜಾರೋಹಣ ನೆರವೇರಿಸಿದ ದೃಶ್ಯ.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದ ಭಾಷಣ, ದೇಶಭಕ್ತಿಗೀತೆಗಳು ಕಾರ್ಯಕ್ರಮಕ್ಕೆ ಶೋಭೆಯನ್ನು ನೀಡಿದವು. ಜೊಲ್ಲೆ ಗ್ರೂಪ್ ವಿವಿಧ ಅಂಗ ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು, ಶ್ರೀ. ಅಪ್ಪಾಸಾಬ ಜೊಲ್ಲೆ, ಶ್ರೀ. ಲಕ್ಷ್ಮಣ ಕಬಾಡೆ, ಶ್ರೀ. ಬಾಬುರಾವ ಮಾಳಿ, ಶ್ರೀ. ಆನಂದ ಪಾಟೀಲ, ಶ್ರೀ ವಿಶ್ವನಾಥ ಪೇಟಕರ, ಶ್ರೀಮತಿ. ಮಂಗಲ ಜೊಲ್ಲೆ, ಶ್ರೀಮತಿ. ಫೈಮಿದಾ ದಾಡಿವಾಲೆ, ಶ್ರೀಮತಿ. ಸುಜಾತಾ ಕಬಾಡೆ, ಶ್ರೀ ಕಲ್ಲಪ್ಪಾ ಶರಣರು, ಶ್ರೀ ಸಂತೋಷ ಪಾಟೀಲ, ಬೀರೇಶ್ವರ ಕೋ– ಆಫ್ ಕ್ರೆಡಿಟ್ ಸೊಸಾಯಿಟಿ ಲಿಮಿಟೆಡ್ ಯಕ್ಸಂಬಾ (ಮಲ್ಟಿಸ್ಟೇಟ್) ಹಾಗೂ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘದ ಎಲ್ಲ ನಿರ್ದೇಶಕ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗದವರು, ಶಾಲೆಯ ಎಲ್ಲ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶಾಲೆಯ ಮುಖ್ಯೋಪಾಧ್ಯಾಯರಾದ ವ್ಹಿ.ಆರ್.ಭಿವಸೆ ಸ್ವಾಗತಿಸಿರು, ವಿದ್ಯಾರ್ಥಿಗಳಾದ ಅನನ್ಯಾ ಚೌಗಲೆ ನಿರೂಪಿಸಿದರು,  ಪೂರ್ವಾ ವಾಲಿಕರ ವಂದಿಸಿದರು.

---

# ಹವ್ಯಾಸ

ಹವ್ಯಾಸಗಳು ಎಂದರೆ ನಮ್ಮ ಮನಸ್ಸಿಗೆ ಸಂತೋಷ ಕೊಡುವ ಕೆಲಸಗಳು, ಕಲೆ, ಕ್ರೀಡೆ ಯಾವುದಾದರೂ ಒಂದು ಪ್ರಕಾರ ಎನ್ನಬಹುದು. ವ್ಯಕ್ತಿಗಳು ಜೀವನ ಒಂದೇ ರೀತಿ ಹೊರನೋಟಕ್ಕೆ ಕಂಡುಬಂದರೂ ಆಸೆ, ಆಸಕ್ತಿ, ವಿಷಯಗಳು ಬೇರೆ, ಬೇರೆ ರೀತಿ ಇರುತ್ತದೆ.

ಒಟ್ಟಾರೆ ಹೇಳುವುದಾದರೆ, ನಮ್ಮ ಹವ್ಯಾಸಗಳು ನಮಗೆ ಆತ್ಮ ಸಂತೃಪ್ತಿಯಿಂದ, ಆತ್ಮ ಸಾಕ್ಷಾತ್ಕಾರದ ಕಡೆಗೆ ಕರೆದುಕೊಂಡು ಹೋಗುತ್ತದೆ. ಎಂದು ನಾವು ಖಚಿತವಾಗಿ ಹೇಳುವುದು.

ಕೆಲವು ಬಾರಿ ನಮ್ಮ ಹವ್ಯಾಸಗಳನ್ನು "ವೃತ್ತಿ" ಸಹ ಮಾಡಿಕೊಳ್ಳಬಹುದು. ಪ್ರವೃತ್ತಿ ಎಂದು ಪರಿಗಣಿಸಿದರೆ ಅಲ್ಲಿ ಕೇವಲ ಮಾನಸಿಕ ಸಂತೃಪ್ತಿ, ಸಂತೋಷ ದೊರಕುತ್ತದೆ. ವೃತ್ತಿ ಎಂದು ನಾವು ಹವ್ಯಾಸಗಳನ್ನು ರೂಢಿಸಿಕೊಂಡರೆ ಹಣ, ಕೀರ್ತಿ ಲಭಿಸುತ್ತದೆ.  ಹವ್ಯಾಸಗಳು ಅಂತರಂಗದ ಅನ್ವೇಷಣೆ ಹೊಸ–ಹೊಸ ಆವಿಷ್ಕಾರಗಳಿಗೆ ದಾರಿ ಮಾಡಿಕೊಡುತ್ತದೆ. ಅನೇಕ ಜನ ಗಣ್ಯ ವ್ಯಕ್ತಿಗಳೂ ಸಹ ತಮ್ಮ ಹವ್ಯಾಸಗಳಿಂದ ನೆಮ್ಮದಿ ಕಂಡುಕೊಂಡಿದ್ದಾರೆ ಎಂಬ ಅನೇಕ ಉದಾಹರಣೆಗಳು ನಮ್ಮ ಕಣ್ಮುಂದಿವೆ.

ಹವ್ಯಾಸಗಳು ಹೊಸ ಪ್ರಪಂಚ ತೆರೆದುಕೊಳ್ಳುವಂತೆ ಮಾಡುತ್ತದೆ ಎನ್ನುವುದು ಶತ ಸಿದ್ಧ ಹೀಗೆ ನಮ್ಮ ಬದುಕು ಅಂತರಂಗ ಶ್ರೀಮಂತಿಕೆ ಅಧಿಕವಾಗಲು ಹವ್ಯಾಸಗಳು ಸಹಕಾರಿ ಅದಮ್ಯ ಚೇತನ ನೀಡುತ್ತವೆ. ಎನ್ನುವುದು ಸತ್ಯ ! ಚೈತನ್ಯ ಬದುಕಿಗೆ ಅವಶ್ಯಕ ಮತ್ತು ಅನಿವಾರ್ಯ.

ಮನುಷ್ಯನಿಗೆ ಕೆಲಸ, ಕಡಿಮೆ ಮಾಡಲು ಬೇಕಾಗಿರುವುದು ಚೈತನ್ಯ ಹೀಗಾಗಿ ಅಂತಹ ಚೈತನ್ಯ ಸದಾಕಾಲ ನಮ್ಮ ಬಳಿ ಇರಬೇಕು ಎಂದರೆ ಹವ್ಯಾಸಗಳಿಗೆ ಶರಣು ಹೋಗಿ ರೂಢಿಸಿಕೊಳ್ಳಲೇಬೇಕು ಮನುಷ್ಯನಿಗೆ ಹವ್ಯಾಸ ಜೇನು ಬೆರೆಸಿರುವ ಹಾಲು ಕುಡಿದಷ್ಟು ಸಂತೋಷ ನೀಡುತ್ತದೆ.

ನಮ್ಮಲ್ಲಿರುವ ಹವ್ಯಾಸವು ನಮಗೆ ಅರಿವಿಲ್ಲದಂತೆ ಅತಿ ಉನ್ನತಕ್ಕೇರುವ ಶಿಖರದ ಮೆಟ್ಟಿಲುಗಳು ಆದರೂ ಆಶ್ಚರ್ಯವಿಲ್ಲ, ಹವ್ಯಾಸವೆಂಬುದು ನಮ್ಮ ಅಂತರಂಗ, ಬಹಿರಂಗ ಎರಡಕ್ಕೂ ಕನ್ನಡಿಯಂತೆ, ಇದ್ದರೆ ಸಾಧಕರ ದಾರಿಯಲ್ಲಿ ನಮ್ಮ ಛಾಪು ಮೂಡುವುದು ಖಂಡಿತ.

ಹವ್ಯಾಸ ಎಂಬುದು ಶುದ್ಧವಾದ ವ್ಯಕ್ತಿತ್ವಕ್ಕೆ ಹಾಕುವ ತಳಪಾಯ ಎಂದರೂ ತಪ್ಪಾಗಲಾರದು. ಹವ್ಯಾಸ ಒಳ್ಳೆಯದಾಗಿದ್ದರೆ ಜೀವನ ಒಳ್ಳೆಯದಾಗಿಯೇ ಇರುವುದು. ಈ ಹವ್ಯಾಸಗಳು ವ್ಯಕ್ತಿಯ ವ್ಯಕ್ತಿತ್ವ ನಿರೂಪಿಸುವಲ್ಲಿ ಪ್ರಮುಖ ಆಧಾರ ಸ್ಥಂಭವಾಗಿವೆ.

ಆದ್ದರಿಂದ ಒಳ್ಳೆಯ ಹವ್ಯಾಸಗಳು ಮನುಷ್ಯನ ಜೀವನಕ್ಕೆ ಭರ–ಭರನೇ ಬಣ್ಣ ತುಂಬಿ ಬಿಡುತ್ತವೆ. ತನ್ನ ಹವ್ಯಾಸದ ಲೋಕದಲ್ಲೇ ವಿಹರಿಸುವವನಿಗೆ ಅದುವೇ ಧ್ಯಾನ, ತಪಸ್ಸು, ಆಗಿಬಿಟ್ಟಿರುತ್ತದೆ. ಬೇರೆ ಚಿಂತೆ, ದುಗಡಗಳಿಗೆ ಅಲ್ಲಿ ಸ್ಥಳವೇ ಇರುವುದಿಲ್ಲ. ಮೈಮರೆತು ಅರಿವಿಲ್ಲದಂತೆ, ಅರಿವಿರುವ ಜಗತ್ತಿನಲ್ಲಿ ವಿಹರಿಸುತ್ತಿರುತ್ತಾನೆ. ಎಂದು ತಿಳಿದುಕೊಳ್ಳಬಹುದು.

ಶಿಲ್ಪಾ ಎಸ್. ಉಪಾಧ್ಯೆ
ಸಹ ಪ್ರಾಧ್ಯಾಪಕರು
ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಎಡ್.)
ಶಿಕ್ಷಣ ಮಹಾವಿದ್ಯಾಲಯ, ನಣದಿ




## ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಯಕ್ಸಂಬಾ




**ಅಗಷ್ಟ 31 2025ರ ಆರ್ಥಿಕ ಸ್ಥಿತಿ**

| | |
|---|---|
| ಶಾಖೆಗಳು | 81 |
| ಠೇವು | 354+ ಕೋಟಿ |
| ಸಾಲ | 180+ ಕೋಟಿ |
| ಸದಸ್ಯರು | 46+ ಸಾವಿರ |
| ಗುಣಿತಾವನಿಗಳು | 128+ ಕೋಟಿ |
| ಲಾಭ 2024–25 | 01+ ಕೋಟಿ |







ಪ್ರಧಾನಮಂತ್ರಿಗಳಾದ ಸನ್ಮಾನ್ಯ ಶ್ರೀ ನರೇಂದ್ರ ಮೋದಿ ಅವರ ಕರೆಯ ಮೇರೆಗೆ ದೇಶಾದ್ಯಂತ ಆರಂಭವಾಗಿರುವ "ಹರ್ ಘರ್ ತಿರಂಗಾ" ಅಭಿಯಾನದ ಅಂಗವಾಗಿ ನಿಪ್ಪಾಣಿ ಯುವ ಮೋರ್ಚಾ ವತಿಯಿಂದ ಆಯೋಜಿಸಿದ ತಿರಂಗಾ ಬೈಕ್ ರ್‍ಯಾಲಿಗೆ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಚಾಲನೆ ನೀಡಿದ ದೃಶ್ಯ.




ಬೆಂಗಳೂರಿನಲ್ಲಿ ಸ್ಪೆಷಲ್ ಒಲಿಂಪಿಕ್ಸ್ ಭಾರತ–ಕರ್ನಾಟಕದ ವಾರ್ಷಿಕ ಸರ್ವ ಸಾಧಾರಣಾ ಸಭೆಯನ್ನು ನಡೆಸಿ, ಮುಂಬರುವ ಕ್ರೀಡಾಕೂಟಗಳಲ್ಲಿ ಅತಿ ಹೆಚ್ಚು ಕ್ರೀಡಾಪಟುಗಳ ಭಾಗವಹಿಸುವಿಕೆ ಹಾಗೂ ಸ್ಪೆಷಲ್ ಒಲಿಂಪಿಕ್ಸ್ ರೂಪರೇಷಗಳ ಕುರಿತು ವಿಶೇಷ ಒಲಿಂಪಿಕ್ಸ್ ಕರ್ನಾಟಕದ ಅಧ್ಯಕ್ಷರಾದ ಸೌ. ಶಶಿಕಲಾ ಜೊಲ್ಲೆಯವರು ಚರ್ಚಿಸುತ್ತಿರುವ ದೃಶ್ಯ.




ದಸರಾ ಹಾಗೂ ದೀಪಾವಳಿ ನಿಮಿತ್ಯ ಜ್ಯೋತಿ ಬಜಾರ್ ನಲ್ಲಿ 2000/– ಮೊತ್ತದ ವಸ್ತುಗಳನ್ನು ಖರೀದಿಸಿದರೆ ಗ್ರಾಹಕರಿಗೆ ಲಕ್ಕಿ ಡ್ರಾ ಕೂಪನ್ ನೀಡುವ ಯೋಜನೆಗೆ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ, ಬಸವಜ್ಯೋತಿ ಯೂಥ ಫೌಂಡೇಶನ ಅಧ್ಯಕ್ಷ್ಯರಾದ ಶ್ರೀ ಬಸವಪ್ರಸಾದ ಜೊಲ್ಲೆ ಯವರು ಅವರು ಹಾಗೂ ವೇದಿಕೆ ಮೇಲಿದ್ದ ಗಣ್ಯರು ಚಾಲನೆ ನೀಡಿದ ದೃಶ್ಯ.





ಶ್ರೀ ಬೀರೇಶ್ವರ ಕೋ ಆಪ್ ಕ್ರೆಡಿಟ್ ಸೋಸಾಯಟಿ ಲಿ., ಯಕ್ಸಂಬಾ (ಮಲ್ಟಿ–ಸ್ಟೇಟ್) ಹಾಗೂ ಜ್ಯೋತಿ ಸಂಸ್ಥೆಯ ಶಾಖಾ ವ್ಯವಸ್ಥಾಪಕರ ಹಾಗೂ ಪಾಸಿಂಗ್ ಆಫೀಸರ್ ಸಭೆಯನ್ನು KPA (Key Perforamance Area) ಸಿಬ್ಬಂದಿಗಳ ಕಾರ್ಯಕ್ಷಮತೆ ಮತ್ತು ಮೌಲ್ಯಮಾಪನ ಕುರಿತು ಸಭೆಯನ್ನು ಜೊಲ್ಲೆ ದಂಪತಿ ಹಾಗೂ ಶ್ರೀ ಬಸವಪ್ರಸಾದ ಜೊಲ್ಲೆ ಯವರು ನಡೆಸಿ ಮಾತನಾಡಿದರು. ಇದೇ ವೇಳೆ ಬೀರೇಶ್ವರ ಸಂಸ್ಥೆಯ ನೂತನ ಲೋಗೋ ಲಾಂಛನ ಬಿಡುಗಡೆಗೊಳಿಸಿ, ಸಿಬ್ಬಂದಿಗಳಿಗೆ 15% DA (ತುಟ್ಟಿ ಭತ್ಯೆ )ಹೆಚ್ಚಿಸಿದರು.




**ನೂತನ ಶಾಖೆ ಉದ್ಘಾಟನೆ**

ಬೆಂಗಳೂರು ನಗರದಲ್ಲಿ ಶ್ರೀ ಬೀರೇಶ್ವರ ಕೋ-ಆಪ್ ಕ್ರೆಡಿಟ್ ಸೋಸಾಯಿಟಿ ಲಿ.,ಯಕ್ಸಂಬಾ (ಮಲ್ಟಿ-ಸ್ಟೇಟ್) ಶಾಖೆ -ಯಶವಂತಪುರ 227 ನೇ ನೂತನ ಶಾಖೆಯನ್ನು ಜೊಲ್ಲೆ ದಂಪತಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಟಿ.ಎನ್. ಜವರಾಯಿಗೌಡ, ಬೆಂಗಳೂರು ಉತ್ತರ ಜಿಲ್ಲೆ ಭಾರತೀಯ ಜನತಾ ಪಾರ್ಟಿ ಅಧ್ಯಕ್ಷರಾದ ಶ್ರೀ ಎಸ್. ಹರೀಶ, ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.



**ನೂತನ ಶಾಖೆ ಉದ್ಘಾಟನೆ**

ಶಿರೋಳ ಪಟ್ಟಣದಲ್ಲಿ ಶ್ರೀ ಬೀರೇಶ್ವರ ಕೋ-ಆಪ್ ಕ್ರೆಡಿಟ್ ಸೋಸಾಯಿಟಿ ಲಿ.,ಯಕ್ಸಂಬಾ (ಮಲ್ಟಿ-ಸ್ಟೇಟ್) ಶಾಖೆ-ಶಿರೋಳ 228 ನೇ ನೂತನ ಶಾಖೆಯನ್ನು ಟಾಕಳಿಯ ಮಲ್ಲಿಕಾರ್ಜುನ ಗುರುದೇವ ತಪೋವನದ ಪ.ಪೂಜ್ಯ. ಶ್ರೀ ಶಿವದೇವ ಸ್ವಾಮೀಜಿಗಳ ದಿವ್ಯ ಸಾನಿದ್ಯದಲ್ಲಿ, ಆಶಾಜ್ಯೋತಿ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಹಾಗೂ ಗಣ್ಯರು, ಸ್ಥಳೀಯ ಮುಖಂಡರು ಉದ್ಘಾಟಿಸಿದರು



**ಪ್ರಶಸ್ತಿ ಪತ್ರ ವಿತರಣೆ**

ಹುಬ್ಬಳ್ಳಿ ನಗರದಲ್ಲಿ ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರ ಸಹಕಾರಿ ಸಂಘಗಳ ಒಕ್ಕೂಟ ನಿ. ಇದರ 32 ನೇ ವಾರ್ಷಿಕ ಸರ್ವಸಾಧಾರಣ ಸಭೆಯಲ್ಲಿ ಸಫಲ್ ಉತ್ಪನ್ನಗಳ ಮಾರಾಟದಲ್ಲಿ ಸಾಧಿಸಿದ ಪ್ರಗತಿಗಾಗಿ ಪ್ರಥಮ ಬಹುಮಾನವನ್ನು ಯಕ್ಸಂಬಾ ಎಣ್ಣೆಬೀಜ ಬೆಳೆಗಾರರ ಸಹಕಾರ ಸಂಘ ಯಕ್ಸಂಬಾ ಇವರಿಗೆ ಚಿಕ್ಕೋಡಿ ಲೋಕಸಭೆಯ ಮಾಜಿ ಸಂಸದರಾದ ಶ್ರೀ ಅಣ್ಣಾ ಸಾಹೇಬ ಜೊಲ್ಲೆ ಪ್ರಶಸ್ತಿ ಪತ್ರ ಮತ್ತು ನಗದು ಬಹುಮಾನವನನು ವಿತರಿಸುತ್ತಿರುವುದು.



**ಭೇಟಿ**

ಮುಂಬೈ ನಗರದ ಜ್ಞಾನದೀಪ ಕೋ-ಆಫ್ ಕ್ರೆಡಿಟ್ ಸೊಸಾಯಟಿ ಲಿ., ಮುಂಬೈ ಇದರ ಮುಖ್ಯ ಕಚೇರಿಗೆ ಬಸವಜ್ಯೋತಿ ಯೂಥ ಫೌಂಡೇಶನ ಅಧ್ಯಕ್ಷ್ಯರಾದ ಶ್ರೀ. ಬಸವಪ್ರಸಾದ ಜೊಲ್ಲೆ ಹಾಗೂ ಬೀರೇಶ್ವರ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಬಹದ್ದೂರ ಗುರವ, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಸುರೇಶ ಮಾನೆ, ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಶೇಖರ ಪಾಟೀಲ, ಸೌಹಾರ್ದಯುತವಾಗಿ ಭೇಟಿ ನೀಡಿ ಸಂಸ್ಥೆಯ ಅಭಿವೃದ್ಧಿಯ ಕುರಿತು ಚರ್ಚಿಸಿದರು.



**ಸತ್ಕಾರ**

ನಿಪ್ಪಾಣಿಯ ಶ್ರೀ ಹಾಲಸಿದ್ಧನಾಥ ಶುಗರ್ ಫ್ಯಾಕ್ಟರಿ ಲಿ.,(ಮಲ್ಟಿ-ಸ್ಟೇಟ್)ಇದರ 37 ನೇ ವಾರ್ಷಿಕ ಸರ್ವ ಸಾಧಾರಣ ಸಭೆಯನ್ನು ಕಣೇರಿಯ ಪ.ಪೂಜ್ಯ ಶ್ರೀ ಜಗದ್ಗುರು ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿಗಳ ದಿವ್ಯ ಸಾನಿದ್ಯದಲ್ಲಿ ಜೊಲ್ಲೆ ದಂಪತಿ ಹಾಗೂ ಶ್ರೀ ಜ್ಯೋತಿಪ್ರಸಾದ ಜೊಲ್ಲೆ ಉದ್ಘಾಟಿಸುತ್ತಿರುವ ದೃಶ್ಯ.




**ಸತ್ಕಾರ**

ಉತ್ತರಪ್ರದೇಶದ ಲಖನೌದಲ್ಲಿ Cogeneration Association Of India ವತಿಯಿಂದ ಆಯೋಜಿಸಿದ ಕೃಷಿ ಮತ್ತು ಇಂಧನ ಕ್ಷೇತ್ರದಲ್ಲಿ ಪ್ರಮುಖ ಬದಲಾವಣೆಯಾಗಲಿರುವ ಸಂಕುಚಿತ ಜೈವಿಕ ಅನಿಲ(CBG) ಕುರಿತು ವಿಚಾರ ಸಂಕೀರ್ಣ ಕಾರ್ಯಕ್ರಮದಲ್ಲಿ ಜೊಲ್ಲೆ ದಂಪತಿ ಯವರು ಭಾಗವಹಿಸಿ, ಸತ್ಕಾರ ಸ್ವಿಕರಿಸುತ್ತಿರುವುದು.



**ಸತ್ಕಾರ**

ಶ್ರೀ ಬೀರೇಶ್ವರ ಕೋ ಆಫ್ ಕ್ರೆಡಿಟ್ ಸೋ ಲಿ. ಮಲ್ಟಿ ಸ್ಟೆಟ್. ಶಾಖೆ ಕೊಲ್ಹಾರದಲ್ಲಿ ಶ್ರೀಮತಿ. ಭಾಗ್ಯಶ್ರೀ ಎಸ್.ಕೆ. ಉಪ ನಿಬಂಧಕರು, ಸಹಕಾರ ಸಂಘಗಳು ವಿಜಯಪುರ. ಇವರು ಶಾಖೆಗೆ ಭೇಟಿ ನೀಡಿದಾಗ ಇವರನ್ನು ಆತ್ಮೀಯವಾಗಿ ಬರಮಾಡಿಕೊಂಡು ಸತ್ಕರಿಸಲಾಯಿತು.



**ವಿಶೇಷ ಒಲಿಂಪಿಕ್ಸ್**

ಬೆಂಗಳೂರಿನಲ್ಲಿರುವ ಉಮ್ಮಿದ ಆಶಾ ಕಿರಣ್ ವಿಶೇಷ ಶಾಲೆ ತನ್ನ ಕ್ರೀಡಾ ಮೂಲ ಸೌಕರ್ಯವನ್ನು ವಿಶೇಷ ಒಲಿಂಪಿಕ್ಸ್ ಭಾರತ ಕರ್ನಾಟಕಕ್ಕೆ ಒದಗಿಸಲಿರುವ ಒಪ್ಪಂದಕ್ಕೆ ವಿಶೇಷ ಒಲಿಂಪಿಕ್ಸ್ ಕರ್ನಾಟಕದ ಅಧ್ಯಕ್ಷರಾದ ಸೌ. ಶಶಿಕಲಾ ಜೊಲ್ಲೆ ಯವರು ಸಹಿ ಹಾಕಿದ ದೃಶ್ಯ.